**ನೌವಾರಿ ಸೀರೆ ಫ್ಯಾಷನ್‌ಪ್ರಿಯರ ಮನ ತಣಿಸುತ್ತಿದೆ. ಒಂಬತ್ತು ಗಜಗಳ ಈ ಸೀರೆಯನ್ನು ಹತ್ತಿ, ರೇಷ್ಮೆ ಬಟ್ಟೆಗಳಿಂದ ತಯಾರಿಸಲಾಗುತ್ತಿದ್ದು, ಮದುವೆ, ಮುಂಜಿಗಳಂತಹ ಶುಭ ಸಮಾರಂಭ, ಹಬ್ಬ ಹರಿದಿನಗಳಲ್ಲೂ ಉಡಲು ಯೋಗ್ಯವಾಗಿದೆ.**





ರಾಣಿಯರು ಕುದುರೆ ಸವಾರಿ, ಕತ್ತಿ ವರಸೆ ಮುಂತಾದ ಶಸ್ತ್ರಾಭ್ಯಾಸಗಳಲ್ಲಿ ಈ ತರಹದ ನೌವಾರಿ ಸೀರೆಯನ್ನು ಆರಾಮವಾಗಿ ಧರಿಸುತ್ತಿದ್ದರು. ಹಾಗೆಯೇ ಮೊದಲಿನಿಂದಲೂ ಬರೀ ಮಹಾರಾಷ್ಟ್ರ ಮಾತ್ರವಲ್ಲ ಕರ್ನಾಟಕದ ಗಡಿ ಭಾಗಗಳಲ್ಲಿ ಕೂಡ ಮಹಿಳೆಯರು ಈ ತರಹದ ನೌವಾರಿ ಕಚ್ಚೆ ಸೀರೆಗಳನ್ನು ಧರಿಸುತ್ತಿರುವುದನ್ನು ನಾವು ಕಾಣಬಹುದು.

ನೌವಾರಿ ಸೀರೆಗಳಲ್ಲಿ ಸಾಕಷ್ಟು ವೆರೈಟಿಗಳಿದ್ದು ಅವುಗಳಲ್ಲಿ ಪ್ರಮುಖವಾಗಿ ಮಹಾರಾಷ್ಟ್ರದ ಬ್ರಾಹ್ಮಣ ಮಹಿಳೆಯರು ನಿತ್ಯವೂ ಮನೆಯಲ್ಲಿ ಧರಿಸುವ ನೂಲು (ಹತ್ತಿ)ಯಿಂದ ಕೂಡಿದ ನೌವಾರಿ ಸೀರೆಗಳು ತುಂಬಾ ಸೊಗಸಾಗಿ ಹಾಗೂ ಸುಂದರವಾಗಿದ್ದವು, ಧರಿಸಲು ಆರಾಮದಾಯಕವಾಗಿದ್ದ ಇದಕ್ಕೆ ಬ್ರಾಹ್ಮಣಿ ನೌವಾರಿ ಸೀರೆ ಎಂದು ಹೆಸರು ಬಂದಿದೆ. ಹಾಗೇ ಶಾಹಿ ಮಸ್ತಾನಿ, ಶಾಹಿ ಬ್ರಾಹ್ಮಣಿ, ಅಪ್ಸರಾ, ದೇವಯಾನಿ, ಪೇಶ್ವೆ ಬ್ರಾಹ್ಮಣಿ, ಕೊಲ್ಹಾಪುರಿ, ಲಾಷ್ಠಿ, ತ್ರಿವೇಣಿ, ಮರಾಠಮೋಳಿ, ಫುಲ್ವಂತಿ ಮುಂತಾದ ವಿನ್ಯಾಸಗಳು ಮಾರುಕಟ್ಟೆಯಲ್ಲಿ ಲಭ್ಯ.

ನೌವಾರಿ ಸೀರೆಯು ಮಹಾರಾಷ್ಟ್ರದ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದೆ. ಪ್ರತಿಯೊಬ್ಬ ಮಹಾರಾಷ್ಟ್ರದ ಮಹಿಳೆಯೂ ತನ್ನ ನೌವಾರಿ ಸೀರೆಗಳ ಬಗ್ಗೆ ಹೆಮ್ಮೆಪಡುತ್ತಾಳೆ. ಧಾರ್ಮಿಕ ಆಚರಣೆಗಳು, ಮದುವೆ, ಶುಭ ಸಮಾರಂಭ, ಗುಡಿ ಪಡ್ವಾ, ಗಣೇಶ ಚತುರ್ಥಿ, ಚಂಪಾ ಷಷ್ಠಿ ಹಾಗೂ ನಾರಳಿ ಪೂರ್ಣಿಮಾದಂತಹ ಯಾವುದೇ ಹಬ್ಬಗಳಲ್ಲಿ ಈ ಸೀರೆಯನ್ನು ಧರಿಸುವುದು ಅಲ್ಲಿನ ಪದ್ಧತಿಯಾಗಿದೆ. ಕಾಲಾನಂತರದಲ್ಲಿ ನೌವಾರಿ ಸೀರೆಗಳು ಹತ್ತಿ ಜವಳಿಗಳಿಂದ ರೇಷ್ಮೆಗೆ ಪರಿವರ್ತನೆಯನ್ನು ಕಂಡಿವೆ. ಈ ಸೀರೆಗಳನ್ನು ಮುಂಚೆ ನೀಲಿ ಮತ್ತು ಹಸಿರು ಬಣ್ಣಗಳಲ್ಲಿ ಮಾತ್ರ ತಯಾರಿಸಲಾಗುತ್ತಿತ್ತು. ನಂತರ ಹಳದಿ, ಕೆಂಪು, ಗುಲಾಬಿ, ಬೂದು, ನೀಲಿ ಮತ್ತು ಚಿನ್ನದ ವರ್ಣಗಳು ಎದ್ದುಕಾಣುವ ಬಣ್ಣಗಳಲ್ಲಿ ತಯಾರಿಸಲಾಗುತ್ತಿದ್ದು, ಇವು ಬೇಸಿಗೆಯ ಸಮಯದಲ್ಲಿ ಧರಿಸಲು ಆರಾಮದಾಯಕವಾಗಿವೆ.

ಮಹಾರಾಷ್ಟ್ರದ ಪುಣೆಯಲ್ಲಿ ರೆಡಿಮೇಡ್ ನೌವಾರಿ ಸೀರೆಯ ಹೊಸ ತಂತ್ರಗಳು ಪ್ರಾರಂಭವಾಗಿರುವುದರಿಂದ ಇದೀಗ ರೆಡಿಮೇಡ್ ನೌವಾರಿ ಸೀರೆಗಳು ವಿವಿಧ ವಿನ್ಯಾಸಗಳಲ್ಲಿ ಹಾಗೂ ವಿವಿಧ ಬಣ್ಣಗಳಲ್ಲಿ ದೊರೆಯುತ್ತಿವೆ. ಇವುಗಳನ್ನು ಧರಿಸಲು ಕೂಡ ಸುಲಭ. ಇವತ್ತಿನ ಆಧುನಿಕ ಯುಗದಲ್ಲಿ ಮದುವೆ ಸಮಾರಂಭಗಳಲ್ಲಿ ನೌವಾರಿ ಸೀರೆ ಧರಿಸುವುದು ಪದ್ಧತಿ ಎಂಬಂತಾಗಿದೆ. ಅಲ್ಲದೆ ರೆಡಿಮೇಡ್ ನೌವಾರಿ ಕಚ್ಚೆ ಸೀರೆಗಳನ್ನು ಧರಿಸಬಹುದು. ನೌವಾರಿ ಕಚ್ಚೆ ಸೀರೆಗಳಲ್ಲಿ ಪೈಠಣಿ ಸೀರೆ ಟ್ರೆಂಡಿಂಗ್‌ನಲ್ಲಿದ್ದು ರಾಯಲ್ ಲುಕ್ ನೀಡುತ್ತದೆ. ಇದರ ಜೊತೆಗೆ ಮಹಾರಾಷ್ಟ್ರದ ಸಾಂಪ್ರದಾಯಿಕ ಆಭರಣಗಳಾದ ನತ್ತು, ತುಷಿ ಹಾರಗಳು, ಜುಮುಕಿ, ಬಳೆಗಳನ್ನು ಮ್ಯಾಚ್ ಮಾಡಿ ಧರಿಸಬಹುದು.

ಇತ್ತೀಚಿನ ದಿನಗಳಲ್ಲಿ ನೌವಾರಿ ಸೀರೆಗಳಲ್ಲಿ ವಿವಿಧ ಶೈಲಿ, ಬಟ್ಟೆ ಮತ್ತು ವಿನ್ಯಾಸ ಅಂಶಗಳು ಕಾಲಕ್ಕೆ ತಕ್ಕಂತೆ ಹೊಸ ಹೊಸ ಅಂಶಗಳನ್ನು ಅಳವಡಿಸಿಕೊಂಡಿವೆ.

ಇದರಲ್ಲಿ ಈಗ ಪೇಶ್ವೆನೌವಾರಿ ಸೀರೆ, ವೆಲ್ವೆಟ್ ನೌವಾರಿ ಸೀರೆ, ನೌವಾರಿ ಪೈಠಣಿ ಸೀರೆ, ರೆಡಿಮೇಡ್ ನೌವಾರಿ ಸೀರೆ ಜನಪ್ರಿಯ ವಿನ್ಯಾಸಗಳಾಗಿವೆ. ಇನ್ನು ಇತ್ತೀಚೆಗೆ ಬಿಡುಗಡೆಯಾದ ಪೌರಾಣಿಕ ಸಿನಿಮಾಗಳಾದ ಬಾಜಿರಾವ್ ಮಸ್ತಾನಿ, ತಾನಾಜಿ, ಛಾವಾ, ಪಾಣಿಪತ್ ಚಿತ್ರದಲ್ಲಿ ದೀಪಿಕಾ, ಪ್ರಿಯಾಂಕ, ಕಾಜೋಲ್, ರಶ್ಮಿಕಾ, ಕೃತಿ ಧರಿಸಿದ್ದ ಹಸಿರು, ನೇರಳೆ, ಮೆರೂನ್ ಬಣ್ಣದ ಪೈಠಣಿ ನೌವಾರಿ ಕಚ್ಚೆ ಸೀರೆಗಳು ಮಹಿಳೆಯರ ಗಮನಸೆಳೆದಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಸೆಲೆಬ್ರಿಟಿಗಳು ಸಮಾರಂಭಗಳಲ್ಲಿ ಈ ತರಹದ ನೌವಾರಿ ಕಚ್ಚೆ ಸೀರೆಗಳನ್ನು ಧರಿಸಿ ಎಲ್ಲರ ಗಮನಸೆಳೆಯುತ್ತಿದ್ದಾರೆ.

### ಸೀರೆಯ ವೈಶಿಷ್ಟ್ಯ

ಉದ್ದ: ಈ ಸೀರೆಯು 8.23 ಮೀಟರ್ (ಎಂದರೆ 9 ಗಜ) ಉದ್ದವಿರುತ್ತದೆ.

ವಿನ್ಯಾಸ: ಇದನ್ನು ಧೋತಿ ಅಥವಾ ಕಚ್ಚೆ ಶೈಲಿಯಲ್ಲಿ ಧರಿಸಲಾಗುತ್ತದೆ, ಇದರಲ್ಲಿ ಸೀರೆಯನ್ನು ಪ್ಯಾಂಟ್ ರೀತಿಯಲ್ಲಿ ಸುತ್ತಿ ಕಟ್ಟಲಾಗುತ್ತದೆ. ಈ ಶೈಲಿಯು ಸುಲಭವಾಗಿ ಓಡಾಡಲು ಮತ್ತು ಕೆಲಸ ಮಾಡಲು ಅನುವು ಮಾಡಿಕೊಡುತ್ತದೆ. ಇದು ಕೇವಲ ಉಡುಪಲ್ಲ, ಬದಲಿಗೆ ಮರಾಠಾ ಸಾಮ್ರಾಜ್ಯದ ಮಹಿಳೆಯರು ಯುದ್ಧಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅನುಕೂಲವಾಗುವಂತೆ ವಿನ್ಯಾಸಗೊಳಿಸಿದ ಯುದ್ಧದುಡುಪು ಎಂದೂ ಪ್ರಸಿದ್ಧಿ ಪಡೆದಿದೆ.

